ರಿ.ನಂ. ಆರ್.ಸಿ.ಎಸ್. 1540 ಸ್ಥಾಪನೆ : 08-11-1939 PAN : AAAJM0788P | GSTIN : 29AAAJM0788P1ZD

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ, ನಿಯಮಿತ, ಶಿವಮೊಗ್ಗ.

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ-577 204 (ಕರ್ನಾಟಕ)

The Malnad Areca Marketing Co-operative Society Ltd.,

A.P.M.C.Yard, Sagara Road, Shivamogga - 577204 (Karnataka)

Phone : 08182-250513, 250514, 250881 | E-mail : ho@mamcos.info | Website : www.mamcos.info

ಕ್ರ.ಸಂ./ಮಾಮ್‌ಕೋಸ್/ಮುದ್ರಣ/625/2025-26 ದಿನಾಂಕ:08/07/2025

**ಸಂಘದ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಮುದ್ರಣದ ಟೆಂಡರ್ ಪ್ರಕಟಣೆ**

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿ., ಎಪಿಎಂಸಿ ಯಾರ್ಡ್, ಸಾಗರ ರಸ್ತೆ, ಶಿವಮೊಗ್ಗ, ಇದರ 2024-25ನೇ ಸಾಲಿನ **ವಾರ್ಷಿಕ ವರದಿಯ** ಅಂದಾಜು **31,000** ಪುಸ್ತಕಗಳನ್ನು (ಅಂದಾಜು **60 ಪುಟಗಳು + ಅಥವಾ -15 ಪುಟಗಳು**, ಎ ಗ್ರೇಡ್ ಮಿಲ್‌ನ 58 ಜಿ.ಎಸ್.ಎಂ. ಕ್ರೀಮ್ ವೋವ್ ಗುಣಲಕ್ಷಣದ ಪೇಪರಿನಲ್ಲಿ ಮುದ್ರಿಸಬೇಕಿದ್ದು, 1/4ಡೆಮಿ ಸೈಜ್ 90 ಜಿ.ಎಸ್.ಎಂ. ಪೇಪರಿನ ರಕ್ಷಾ ಪುಟವೂ ಸೇರಿ) ಮತ್ತು **ಲೆಕ್ಕಪರಿಶೋಧನಾ ವರದಿಯ 4000** ಪುಸ್ತಕಗಳನ್ನು (ಅಂದಾಜು **85 ಪುಟಗಳು + ಅಥವಾ -15 ಪುಟಗಳು**), ಎ ಗ್ರೇಡ್ ಮಿಲ್ ನ 58 ಜಿ.ಎಸ್.ಎಂ. ಕ್ರೀಮ್ ವೋವ್ ಗುಣಲಕ್ಷಣದ ಪೇಪರಿನಲ್ಲಿ ಮುದ್ರಿಸಬೇಕಿದ್ದು, 1/4ಡೆಮಿ ಸೈಜ್ 90 ಜಿ.ಎಸ್.ಎಂ. ಪೇಪರಿನ ರಕ್ಷಾ ಪುಟವೂ ಸೇರಿ) ಮುದ್ರಿಸಲು ಟೆಂಡರ್‌ನ್ನು ಕರೆಯಲಾಗಿದೆ. ಈ ಪ್ರಕ್ರಿಯೆ **ಟೆಂಡರ್ ಹಾಗೂ ನೆಗೋಷಿಯೇಷನ್** ಅನ್ನು ಒಳಗೊಂಡಿದೆ.

ದರವನ್ನು ನಮೂದಿಸುವಾಗ ಒಂದು ಪುಟದ ಮುದ್ರಣಕ್ಕೆ (ದರವು ರಕ್ಷಾ ಪುಟದ ದರವನ್ನು ಒಳಗೊಂಡಿರಬೇಕು) ದರವನ್ನು ನಮೂದಿಸುವುದು. ಹಾಗೂ **ಮೂಲ ಬೆಲೆ ( ಸಾಗಾಣಿಕ ವೆಚ್ಚ ಹಾಗೂ ಇತರೆ ವೆಚ್ಚಗಳು ಸೇರಿ) + ಜಿ.ಎಸ್.ಟಿ.** ಹೀಗೆ ಪ್ರತ್ಯೇಕವಾಗಿ ದರವನ್ನು ನಮೂದಿಸುವುದು. ಜಿ.ಎಸ್.ಟಿ ಅನ್ವಯವಾಗದಿದ್ದಲ್ಲಿ ಅದರ ಬಗೆಗೆ ಕೂಡ ನಮೂದಿಸುವುದು.

**ಟೆಂಡರ್‌ನೊಂದಿಗೆ ರೂ.35,000-00 ಡಿ.ಡಿ.ಯನ್ನು ಮಾಮ್‌ಕೋಸ್ ನಿ., ಶಿವಮೊಗ್ಗ ಹೆಸರಿನಲ್ಲಿ ಪಡೆದು ಲಗತ್ತಿಸಿರಬೇಕು.** ಲಕೋಟೆಯ ಮೇಲೆ **"ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ" ಮುದ್ರಣಕ್ಕೆ ಟೆಂಡರು** ಎಂದು ನಮೂದಿಸಿರಬೇಕು. ಟೆಂಡರ್‌ನೊಂದಿಗೆ ಮೇಲೆ ತಿಳಿಸಿರುವ ಮಾದರಿಯ ಪೇಪರ್‌ನ ಸ್ಯಾಂಪಲ್ ಅನ್ನು ಲಗತ್ತಿಸಿರಬೇಕು. **ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ:18/07/2025 ಸಂಜೆ 5.00 ಗಂಟೆ.** ನಂತರ ಬರುವ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕೇಂದ್ರಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

**ಅತಿಮುಖ್ಯ ಸೂಚನೆಗಳು:**

**1. ಯಾವುದೇ ಕಾರಣವನ್ನು ನೀಡದೆ, ಯಾವುದೇ ಸಮಯದಲ್ಲಿ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ಮಾಮ್‌ಕೋಸ್ ನಿ., ಇದರ ಆಡಳಿತ ಮಂಡಳಿಗೆ ಇರುತ್ತದೆ.**

**2. ಮಾದರಿಯ ಕರಡು ಪ್ರತಿಯಲ್ಲಿ ತಿದ್ದುಪಡಿ ಮಾಡಿಕೊಟ್ಟ ಅಂಶವನ್ನು ಸರಿಯಾಗಿ ತಿದ್ದುಪಡಿ ಮಾಡದೆ ತಪ್ಪಾಗಿ ಅಂತಿಮ ಮುದ್ರಣ ಮಾಡಿದಲ್ಲಿ ಸಂಬಂಧಿಸಿದ ಮುದ್ರಣಾಲಯದವರ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಹಣ ಪಾವತಿಯನ್ನು ತಡೆಹಿಡಿಯಲಾಗುವುದು.**

(signature)

ವ್ಯವಸ್ಥಾಪಕ ನಿರ್ದೇಶಕರು
ಮಾಮ್‌ಕೋಸ್ ನಿ.,
ಶಿವಮೊಗ್ಗ